ಶ್ರೀ ಕೆ. ಲಕ್ಕಪ್ಪ.—ಮೊದಲೇ ಉತ್ತರ ಕೊಟ್ಟಿದ್ದೇನೆ. ಮನಸ್ಸಿಗೆ ಬಂದಹಾಗೆ ಊಹೆ ಮಾಡುತ್ತಾರೆಯೇ ಹೊರತು ಅದರಲ್ಲಿ ನಿಜಾಂಶ ಇಲ್ಲ.

Sri S. SIVAPPA.—Sir, this question may be held over.

Mr. SPEAKER.—The Hon. Minister is going to place all the names of the partners on the Table of the House by tomorrow. The hon. Member is at liberty to look into that. The Hon. Minister may please give it tomorrow.

Sri H. SIDDAVEERAPPA.—Sir, while he collects information I would request the Hon. Minister, through the Chair, that information regarding the contracts that are already there in the name of the Construction Company, but which have not been completed like this ?

Bore-Wells

1020. Sri B. VENKATARAYAPPA (Sidlaghatta).—

Will the Minister for Agriculture be pleased to state :—

(*a*) the number of bore-well units kept in the Agriculture Department ;

(*b*) the number of bore-wells dug during 1967-68 ?

Sri B. RACHAIAH (Minister for Agriculture).—

(*a*) 60.

(*b*) 97.

2-00 P.M.

ಶ್ರೀ ಬಿ. ವೆಂಕಟರಾಯಪ್ಪ.—ಉತ್ತರದಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳು ಅಷ್ಟು ತೃಪ್ತಿಕರವಾಗಿಲ್ಲ. ಆದ್ದರಿಂದ ಕೆಲಸ ಇನ್ನೂ ತೀವ್ರವಾಗಿ ನಡೆಯುವುದಕ್ಕೆ ಸರ್ಕಾರದವರು ಏನು ಕ್ರಮ ಕೈಗೊಳ್ಳಬೇಕೆಂದಿದ್ದಾರೆ ?

†ಶ್ರೀ ಬಿ. ರಾಚಯ್ಯ.—ವ್ಯವಸಾಯದ ಇಲಾಖೆಯಲ್ಲಿ 60 ಬೋರ್‌ವೆಲ್‌ಗಳಿಲ್ಲ. ಅಲ್ಲಿ ಇರತಕ್ಕವು 50 ಮಾತ್ರ. ಇನ್ನುಳಿದ 10 ರಿಪೇರಿಯಲ್ಲಿವೆ. ಅಷ್ಟೇ ಅಲ್ಲದೆ ನುರಿತ ಆಪರೇಟರುಗಳ ತೊಂದರೆ ಬೇರೆ ಇತ್ತು. ಅದರಿಂದ 119 ಬಾವಿಗಳನ್ನು ತೆಗೆಸಲಾಯಿತು. ಮುಂದಕ್ಕೆ ಇನ್ನೂ ಹೆಚ್ಚಿನ ಬಾವಿಗಳನ್ನು ತೆಗೆಸುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಇಲ್ಲಿ ಯಾವ ಯಾವ ಐಟಂಗಳಿಗೆ ಎಷ್ಟೆಷ್ಟು ಹಣ ಖರ್ಚಾಗಿದೆ ?

ಶ್ರೀ ಬಿ. ರಾಚಯ್ಯ.—ನೋಟೀಸ್.

ಶ್ರೀ ಬಿ. ವೆಂಕಟರಾಯಪ್ಪ.—ಸಿಡಲುಗಟ್ಟದಲ್ಲಿ ಬೋರ್‌ವೆಲ್ ಮಿಷನ್ನಿನ ಅಗತ್ಯ ಬಹಳವಾಗಿದ್ದರೂ ಅಲ್ಲಿಗೆ ಅದನ್ನು ಕೊಡದೆ ವಿಳಂಬ ಮಾಡುತ್ತಿರುವುದಕ್ಕೆ ಕಾರಣವೇನು ?

ಶ್ರೀ ಬಿ. ರಾಚಯ್ಯ.—ಕೋಲಾರ ಜಿಲ್ಲೆಯಲ್ಲಿ 15 ಯೂನಿಟ್ಟುಗಳಿವೆ. ಬೆಂಗಳೂರು ಜಿಲ್ಲೆಯಲ್ಲಿ 12 ಯೂನಿಟ್ಟುಗಳಿವೆ. ಡಿಮ್ಯಾಂಡ್ ಜಾಸ್ತಿ ಇದ್ದುದರಿಂದ ಸ್ವಲ್ಪ ನಿಧಾನವಾಗಿರಬಹುದು.

Mr. SPEAKER.—Question hour is over.